

ತರಹ ಕಂಡಿತು. ಒಂದು ಗಂಟೆ ಕಾದರೂ ಅದು ಎದ್ದು ಬರಲಿಲ್ಲ. ಅದರ ಸಂಕಟ ಏನಿತ್ತೋ? ಹೇಳುವವರು ಯಾರು? ನಮಗೆ ಅದು ಎದ್ದು ನಡೆದು ಬಂದು ಮುಖದರ್ಶನ ನೀಡಲಿ ಎಂಬ ಹಪಾಹಪಿ. ಇದೆಲ್ಲಾ ನೆನಪಾಗಿ ಡಾ.ರಾಘವೇಂದ್ರ, ತಡೋಬಾದಲ್ಲಿ ಯಾನಾಡಿ ಟೈಗರ್ ಇದಾವೆ. ನಮ್ ಹಣೆಬರಕ್ಕೆ ಒಂದೂ ನೆಟ್ಟಗೆ ಕಾಣ್ತಿಲ್ಲವಲ್ಲ ಸರ್' ಎಂದು ಬೇಸರ ವ್ಯಕ್ತಪಡಿಸಿದರು. 'ನನ್ನ ಜೊತೆ ಬಂದ್ರೆ ಹಂಗೇನೆ. ಹುಲಿ ಅಷ್ಟು ಸಲೀಸಾಗಿ ಸಿಗಲ್ಲ. ನನ್ನ ಜಾತಕದಲ್ಲಿರುವ ದೋಷವನ್ನು ನೀವೂ ಅನುಭವಿಸಬೇಕು' ಎಂದು ಶ್ರೀಕಾಂತ್ ನಕ್ಕರು. ಇದಕ್ಕೆ ಕಾರಣವೂ ಇತ್ತು ಬಿಡಿ.

ನನ್ನ ಜೊತೆ ಬರೋಬ್ಬರಿ ಐವತ್ತಾರು ಸಫಾರಿ ಟ್ರಿಪ್ಪು ಮಾಡಿದ ಮೇಲೆಯೇ ಶ್ರೀಕಾಂತ್ ಅವರಿಗೆ ಭದ್ರಾ ಅಭಯಾರಣ್ಯದಲ್ಲಿ ಹುಲಿ ಸಿಕ್ಕಿದ್ದು. ಅಷ್ಟೊಂದು ಸಲವೂ ಅವರು ಛಲಬಿಡದ ತ್ರಿವಿಕ್ರಮನಂತೆ ನನ್ನ ಜೊತೆ ದಂಡಯಾತ್ರೆ ಮಾಡಿದ್ದರು. ಕೊನೆ ಕೊನೆಗಂತೂ ಅವರ ಮಗ ಶಶಾಂಕ ಇವರನ್ನು ರೇಗಿಸಲು, 'ಪಪ್ಪಾ ಹುಲಿಯಂತೂ ನಿನಗೆ ಸಿಗಲ್ಲ. ಕೊನೇ ಪಕ್ಷ ಅದರ ಕಕ್ಕವನ್ನಾದರೂ ತಂದು ತೋರಿಸು' ಎಂದು ಕಿಚಾಯಿಸುತ್ತಿದ್ದ. 'ನಮ್ ಮನೆ ಹೈಕಳೆಲ್ಲಾ ನಮ್ಮನ್ನು ಹಂಗಿಸುವಂತಾಯಿತಲ್ಲ ಸರ್' ಎಂದು ಶ್ರೀಕಾಂತ್ ಚಡಪಡಿಸಿದ್ದರು. ಫೋಟೋಗ್ರಫಿ ಚಟದಲ್ಲಿ ಮುಳುಗಿದವರಿಗೆ ಈ ನಿರಾಸೆ ಅತ್ಯಂತ ಸಾಮಾನ್ಯ.

ನಾನು ಮೊದಲು ಹುಲಿಗಳೆಂದರೆ ಎಲ್ಲಾ ಪ್ರಾಂತ್ಯದವು ಒಂದೇ ಎಂದು ಭಾವಿಸಿದ್ದೆ. ಆದರೆ ಇವುಗಳ ಬಣ್ಣ, ಆಕಾರ, ಎತ್ತರ, ಮುಖ ಲಕ್ಷಣ, ಸ್ವಭಾವಗಳಲ್ಲಿ ಇರುವ ವೈವಿಧ್ಯತೆ ಮತ್ತು ವಿಶೇಷ ಗೊತ್ತಾಗಿದ್ದು ಆಮೇಲೆ. ನನ್ನ ಪ್ರವಾಸದ ಪುಟ್ಟ ಅನುಭವಗಳು ಹೊಸ ವಿಷಯಗಳನ್ನು ತಿಳಿಸಿದವು. ಇದರಲ್ಲಿ ಪ್ರವಾಸಿಗರ ಒಡನಾಟ, ಸಂಪರ್ಕ ಅತ್ಯಂತ ಕಡಿಮೆ ಇರುವ ಕಾಡಿನ ಹುಲಿಗಳು ನಾಚಿಕೆ ಮತ್ತು ಅಂಜಿಕೆ ಸ್ವಭಾವ ಹೊಂದಿರುತ್ತವೆ ಎಂಬುದು. ಈ ಕಾರಣಕ್ಕೆ ಭದ್ರಾ, ಅಣಶಿ, ಕೆ. ಗುಡಿ, ಮಧುಮಲೈ, ಅಣ್ಣಾಮಲೈ, ಪೆರಿಯಾರ್, ನಾಗಾರ್ಜುನ ಸಾಗರ, ಮುಂತಾದ ಕಾಡಿನಲ್ಲಿರುವ ಹುಲಿಗಳ ಮುಖಾಮುಖಿ ಪಡೆಯುವುದು ಅಷ್ಟು ಸಲೀಸಲ್ಲ. ಅದೇ ಕಬಿನಿ, ಬಂಡೀಪುರ, ತಡೋಬಾ, ರಣತಂಬೂರ್, ಬಾಂದವಗಡ್, ಜಿಮ್ ಕಾರ್ಬೆಟ್ ಗಳಂತಹ ಜನ